65

<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಂದಂನ್ಯಾಂದಂರವರ ನ್ಯಾಯಾಲಯದಲ್ಲಿ, ತರೀಕೆರೆ.</u>

## <u>ಕ್ರಿಂಮೊಂಸಂಖ್ಯೆ:684/2014</u>

ಪಿರ್ಯಾದಿ : ರಾಜ್ಯದ ಪರವಾಗಿ ಲಕ್ಕವಳ್ಳಿ ಆರಕ್ಷಕರು

ವಿರುದ್ಧ

ಆರೋಪಿಗಳು : ೧. ಎಂ.ಸೀತಾರಾಮು,
೨. ಕೆಂ.ರಾಮಯ್ಯ.

## -: <u>ದೋಷಾರೋಪಣೆ</u> :-

ಶ್ರೀ ಎಸ್.ಎಂ.ಅರುಟಗಿ, ಬಿಂಕಾಂ. ಎಲ್.ಎಲ್.ಬಿ.(ಸ್ಪೆಷಲ್), ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ತರೀಕೆರೆ ಆದ ನಾನು ನಿಮ್ಮಗಳ ವಿರುದ್ಧ ಮಾಡುವ ದೋಷಾರೋಪಣೆಗಳೇನೆಂದರೆ:-

ಲಕ್ಕವಳ್ಳಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಅರಿಸೀಕೆರೆ ಗ್ರಾಮದ ಸರ್ವೆ ನಂ.7ಪಿ2 ರಲ್ಲಿರುವ ಸರ್ಕಾರಿ ಜಮೀನು ಬಾವಿಕೆರೆಯಲ್ಲಿರುವ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಇಲಾಖೆಗೆ ಸೇರಿದ್ದು, ಆರೋಪಿತರುಗಳಾದ ನೀವು, ನಿಮ್ಮ ಪೈಕಿ ಒಂದನೇ ಆರೋಪಿ ಸದರಿ ಜಮೀನಿನ 40)(70 ಅಡಿ ಜಾಗವನ್ನು ೨ನೇ ಆರೋಪಿಯಿಂದ ಬಾವಿಕೆರೆ ಗ್ರಾಮಪಂಚಾಯ್ತಿಯ ಕಾರ್ಯದರ್ಶಿಯವರಿಗೆ ಆಮಿಷ ತೋರಿಸಿ ಅರಸೀಕೆರೆ ಅಸೆಸ್‌ಮೆಂಟ್ ಪುಸ್ತಕದಲ್ಲಿ ಹೆಚ್ಚುವರಿಯಾಗಿ ದಾಖಲೆ ಸೃಷ್ಟಿ ಮಾಡಿಸಿಕೊಂಡು, ಅಲ್ಲದೇ ಸದರಿ ಜಾಗವು ಸರ್ಕಾರಿ ಜಾಗವೆಂದು ಗೊತ್ತಿದ್ದರೂ ಸಹ ಅಕ್ರಮ ಪ್ರವೇಶ ಮಾಡಿ ಸ್ವಾಧೀನ ಅನುಭವ ಪಡೆಯಲು ಹೋಗಿದ್ದು, ಇದರಿಂದ ಒಂದನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 447, 192(ಎ) ಕೆಂ.ಎಲ್.ಆರ್. ಆಕ್ಟ್ 1964 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, ನಿಮ್ಮ ಪೈಕಿ ೨ನೇ ಆರೋಪಿ, ಬಾವಿಕೆರೆ ಗ್ರಾಮ ಪಂಚಾಯ್ತಿಯ ಕಾರ್ಯದರ್ಶಿಯಾಗಿದ್ದು, ಸರ್ಕಾರಿ

ಜಾಗವನ್ನು ಸರ್ಕಾರದ ಇಲ್ಲವೇ ಆಡಳಿತ ಮಂಡಳಿಯ ಆದೇಶವಿಲ್ಲದೇ ಗ್ರಾಮಪಂಚಾಯ್ತಿಯ ಅಸೆಸ್‌ಮೆಂಟ್ ಪುಸ್ತಕದಲ್ಲಿ ಹೆಚ್ಚುವರಿಯಾಗಿ ನಮೂದು ಮಾಡಿ ದಾಖಲೆ ಸೃಷ್ಟಿ ಮಾಡಿ ಅಪರಾಧಿಕ ಒಳಸಂಚು ಮಾಡಿದ್ದು, ಇದರಿಂದ ಎರಡನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 417, 120(ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ: 02ನೇ ಜುಲೈ, 2015.

(ಎಸ್.ಎಂ.ಅರುಟಗಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಂ.ದಂ.ನ್ಯಾಂ.ದಂ.
ತರೀಕೆರೆ.